ಛಂಧಸ್ಸು

(ಪ್ರಾಸ, ಯತಿ, ಗಣ)

Contents

❖ ಪ್ರಾಸ :– 2

1 ಸಿಂಹ ಪ್ರಾಸ :– 2

2 ಗಜಪ್ರಾಸ :– 2

3 ವೃಷಭಪ್ರಾಸ :– 2

4 ಅಜಪ್ರಾಸ :– 2

5 ಶರಭಪ್ರಾಸ :– 2

6 ಹಯಪ್ರಾಸ :– 2

❖ ಯತಿ :– 2

❖ ಗಣ :– 2

1 ಮಾತ್ರ ಗಣ 2

1.1 ಮಾತ್ರ ತ್ರಿಪದಿ :– 2

1.2 ಮಾತ್ರ ಚೌಪದಿ :– 2

1.3 ಮಾತ್ರ ಷಟ್ಪದಿ :– 3

1.4 ರಗಳೆ :– 4

2 ಅಕ್ಷರ ಗಣ 5

2.1 ಖ್ಯಾತ ಕರ್ನಾಟಕ ವೃತ್ತಗಳು :– 5

3 ಅಂಶ ಗಣ 7

3.1 ಅಂಶ ತ್ರಿಪದಿ :– 7

3.2 ಅಂಶ ಚೌಪದಿ :– 7

3.3 ಅಂಶ ಷಟ್ಪದಿ :– 9

SSV

ಛಂಧಸ್ಸು

(ಪ್ರಾಸ, ಯತಿ, ಗಣ)

❖ಪ್ರಾಸ :–

1 ಸಿಂಹ ಪ್ರಾಸ :–
2 ಗಜಪ್ರಾಸ :–
3 ವೃಷಭಪ್ರಾಸ :–
4 ಅಜಪ್ರಾಸ :–
5 ಶರಭಪ್ರಾಸ :–
6 ಹಯಪ್ರಾಸ :–

❖ಯತಿ :–

ಯತಿಯೆಂದರೆ ಪದ್ಯಗಳನ್ನು ಓದುವಾಗ ನಿಲ್ಲಿಸುವ ಸ್ಥಳಗಳು. ಹೀಗೆ ನಿಲ್ಲಿಸುವುದಕ್ಕೆ ಗೊತ್ತಾದ ಸ್ಥಳಗಳಲ್ಲಿ ನಿಲ್ಲಿಸಿದರೆ ಅರ್ಥ ಕೆಡುವಂತಿರಬಾರದು.

❖ಗಣ :–

(ಮಾತ್ರ ಗಣ , ಅಕ್ಷರ ಗಣ , ಅಂಶ ಗಣ)

SSV

1 ಮಾತ್ರ ಗಣ

1.1 ಮಾತ್ರ ತ್ರಿಪದಿ :–

ಉದಾ :– ಕಲ್ಲರಳಿ ಹೂವಾಗಿ ಎಲ್ಲರಿಗೆ ಬೇಕಾಗಿ 5+5+5+5
ಮಲ್ಲಿಕಾರ್ಜುನನ ಶಿಕರಕ್ಕೆ ಬೆಳಕಾಗಿ 5+3+5+5
ಬಲ್ಲವರು ಹೇಳಿ ಸರ್ವಜ್ಞ 5+3+5

1.2 ಮಾತ್ರ ಚೌಪದಿ :–

ಉದಾ :– ಅಶ್ವೀಜ ಶುದ್ಧ ಮಾನವಮಿ ಬರಲೆಂದು 5+5+5+3
ಐಶ್ವರ್ಯ ಸಕಲ ಸಂಪದ ಹೆಚ್ಚಲೆಂದು 5+5+5+3
ಈಶ್ವರನ ಕೃಪೆ ನಿಮಗೆ ಸುಖಿಯಾಗಲೆಂದು 5+5+5+3
ಶಾಶ್ವತದಿ ಹರಸಿದೆವು ಬಾಲಕರು ಬಂದು 5+5+5+3

1.2.1 ಕಂಧ ಪದ್ಯ :–

ಉದಾ :– ಶ್ರೀವಾಗ್ದೇವಿಗೆ ಶಬ್ದದಿ 4+4+4
ನಾವಾವಿಂದ್ರಿಯದ ವಿಷಯಮಂ ಶೋತ್ರದೊಳು । 4+4+4+4+4
ದ್ಭಾವಿಪ ನಿರ್ಮಳ ಮೂರ್ತಿಗಿ 4+4+4
ಳಾವಂದ್ಯೆಗೆ ಶಾಸ್ತ್ರ ಮುಖದೊಳವನತನ ಪ್ಪೆಂ ॥ 4+4+4+4+4

1.3 ಮಾತ್ರ ಷಟ್ಪದಿ :–

1.3.1 ಶರ ಷಟ್ಪದಿ :–

ಉದಾ :–	ಈಶನ ಕರುಣೆಯ	4+4
	ನಾಶಿಸು ವಿನಯದಿ	4+4
	ದಾಸನ ಹಾಗೆಯೆ ನೀ ಮನವೇ ।	4+4+4+ಗು
	ಕ್ಲೇಶದ ವಿಧ ವಿಧ	4+4
	ಪಾಶದ ಹರಿದು ವಿ	4+4
	ಲಾಸದಿ ಸತ್ಯವ ತಳಿ ಮನವೇ ॥	4+4+4+ಗು

1.3.2 ಕುಸುಮ ಷಟ್ಪದಿ :–

ಉದಾ :–	ನಾಡುಮನಸಿಜನೊಲವಿ	5+5
	ನಾಡುವೆಡೆ ಸಂತತಂ	5+5
	ಬೀಡು ರತಿಪತಿಗೆ ಸತತ ನಿಧಾನವು ।	5+5+5+ಗು
	ನೋಡಿದನಿಮಿಷಪತಿಗೆ	5+5
	ಮಾಡುವುದು ವಿನಯವನು	5+5
	ನಾಡಾಡಿಯವರ್ಗೆ ಬಣ್ಣಿಸಲುಮೊಗ್ಗೇ ॥	5+5+5+ಗು

1.3.3 ಬೋಗ ಷಟ್ಪದಿ :–

ಉದಾ :–	ತಿರುಕನೋರ್ವನೂರ ಮುಂದೆ	3+3+3+3
	ಮುರುಕು ಧರ್ಮಶಾಲೆಯಲ್ಲಿ	3+3+3+3
	ವೊರಗಿರುತ್ತಲೊಂದು ಕನಸಕಂಡನೆಂತನೆ ।	3+3+3+3+3+3+ಗು
	ಪುರದ ರಾಜಸತ್ತನವಗೆ	3+3+3+3
	ವರಕುಮಾರರಿಲ್ಲದಿರಲು	3+3+3+3
	ಕರಿಯ ಕೈಗೆ ಕುಸುಮಮಾಲೆಯಿತ್ತು ಪುರದೊಳು ॥	3+3+3+3+3+3+ಗು

SSV

1.3.4 ಭಾಮಿನೀ ಷಟ್ಪದಿ :–

ಉದಾ :–	ವೇದಪುರುಷನ ಸುತನ ಸುತನ ಸ	3+4+3+4
	ಹೋದರನ ಹೆಮ್ಮಗನ ಮಗನ ತ	3+4+3+4
	ಳೋದರಿಯ ಮಾತುಳನ ಮಾವನನತುಳಭುಜಬಲದಿ ।	3+4+3+4+3+4+ಗು
	ಕಾದು ಗೆಲಿದನನಣ್ಣನವ್ವೆಯ	3+4+3+4
	ನಾದಿನಿಯ ಜಠರದಲಿ ಜನಿಸಿದ	3+4+3+4
	ನಾದಿಮೂರುತಿ ಸಲಹೊ ಗದುಗಿನ ವೀರನಾರಯಣ ॥	3+4+3+4+3+4+ಗು

1.3.5 ಪರಿವರ್ಧಿನೀ ಷಟ್ಪದಿ :–

ಉದಾ :–	ಸ್ಮರವಾಜ್ಯದ ಮೈಸಿರಿ ಶೃಂಗಾರದ	4+4+4+4
	ಶರನಿಧಿರತಿ ನಾಟ್ಯದರಂಗಸ್ಥಳ	4+4+4+4
	ವಿರಹದ ನೆಲೆವೀಡೋಪರಕೂರಾಟದ ಕೊಸರಿನ ಗೊತ್ತು ।	4+4+4+4+4+4+ಗು
	ಸರಸರ ಸಂತವಣೆಯ ಮನೆ ಸುಗ್ಗಿಯ	4+4+4+4
	ಪೊರವಾಗರ ಭಾವಾಲಯವಪ್ಪಂ	4+4+4+4
	ತಿರೆ ಪೇರೆದನಮರುಕವನು ದೇಪಮಹೀಪತಿ ಕನ್ನಡಿಸಿ ॥	4+4+4+4+4+4+ಗು

1.3.6 ವಾರ್ಧಕ ಷಟ್ಪದಿ :–

ಉದಾ :– ಬಲ್ಗಯ್ಯ ನೃಪರಂಜಿ ತಡೆಯದೆರಘೂದ್ವಹನ 5+5+5+5
ಸೊಲ್ಗೇಳಿ ನಮಿಸಲಿಳೆಯೊಳ್ ಚರಿಸುತಧ್ವರದ 5+5+5+5
ನಲ್ಗುದುರೆ ಬಂದು ವಾಲ್ಮೀಕಿಯ ನಿಜಾಶ್ರಮದ ವಿನಿಯೋಗದುಪವನದೊಳು । 5+5+5+5+5+5+ಗು
ಪುಲ್ಗಳ ಪಸುರ್ಗೆಳಸಿ ಪೊಕ್ಕಡಾ ತೋಟಗಾ 5+5+5+5
ವಲ್ಗೆ ತನ್ನೊಡನಾಡಿಗಳಕೂಡಿ ಲೀಲೆ ಮಿಗೆ 5+5+5+5
ಬಿಲ್ಗೊಂಡು ನಡೆತಂದವಂ ಕಂಡನರ್ಚಿತ ಸುವಾಜಿಯಂ ವೀರಲವನು ॥ 5+5+5+5+5+5+ಗು

1.3.7 ಉದ್ದಂಡ ಷಟ್ಪದಿ :–

ಉದಾ :– ಪರಿಕಿಪೊಡೀಕೃತಿ ಗಾವುದು ಮೊದಲೆನೆ ಹಳಚಂ 4+4+4+4+4 / 4+6+4+6
ತೆರೆಯೊಳ್ ತಿರುಗುವ ಕರಿಮಕ ರಂಗಳ ಪುಚ್ಛೋ 4+4+4+4+4 / 4+6+4+6
ತ್ಕರಹತಿಯಿಂ ಚೆಲ್ಲಿದ ಮಣಿಗಳ ಬೆಳಗಿಂ ಶ್ವೇತದ್ವೀ ಪವನಣ ಕಿಸುತ । 4+4+4+4+4+4+4+4 / 4+6+4+6+4+6+ಗು
ಶರಸಿಧಿಯೊಪ್ಪುವುದಂತಾ ಶರಸಿಧಿಪರಿವೃತ 4+4+4+4+4 / 4+6+4+6
ಧರಯೊಪ್ಪುವುದಂತಾ ಧರೆಯ ಶಿರೋಮಣಿಯೋ 4+4+4+4+4 / 4+6+4+6
ಲ್ಸುರಗಿರಿಯಪ್ಪುವುದಂತಾ ಸುರಗಿರಿಯುತ್ತರ ಭಾಗವನೇಂ ಬಣ್ಣಿಪೆನು ॥ 4+4+4+4+4+4+4+4 / 4+6+4+6+4+6+ಗು

1.4 ರಗಳೆ :–

1.4.1 ಉತ್ಸಾಹ ರಗಳೆ (12) :–

ಉದಾ :– 1) ಕುಳಿರ್ವ ಪೊಂಗೊಳಂಗಳಲ್ಲಿ 3+3+3+3
ಜಲದಿ ಕಾವೊಳಂಗದಲ್ಲಿ. 3+3+3+3

2) ಮಾವಿನಡಿಯೊಳಾಡುತುಂ 3+3+3+ಗು
ಪಾಡನೆಯ್ದೆ ಕೇಳುತುಂ 3+3+3+ಗು

SSV

1.4.2 ಮಂದಾನಿಲ ರಗಳೆ (16) :–

ಉದಾ :– 1) ಆ ವೇಳೆಯೊಳತಿ ಸಂಭ್ರಮ ಮೆಸೆದಿರೆ 4+4+4+4
ಪೂವಲಿ ಪುರವೀಥಿಗಳೊಳ್ ನೆರೆದಿರೆ. 4+4+4+4

2) ನಂದ ನಂಗಳೊಳ್ ಸುಳಿವ ಬಿರಯಿಯಿಂ 3+5+3+5
ಕುಂಪುಕಣ್ ಮಲೆಯಪೂತ ಸುರಯಿಯಿಂ. 3+5+3+5

1.4.3 ಲಲಿತ ರಗಳೆ (20) :–

ಉದಾ :– ಏನವ್ವ ಸಂಪಿಗೆಯೆ ಶಿವನ ಸಿರಿಮುಡಿಗಿಂದು 5+5+5+5+5
ನೀನೀವ ಪೊಸ ಪೊಗಳಂ ನೀಡು ನೀಡೆಂದು. 5+5+5+5+5

2 ಅಕ್ಷರ ಗಣ

2.1 ಖ್ಯಾತ ಕರ್ನಾಟಕ ವೃತ್ತಗಳು :–

<u>“ ಯಮಾತಾರಾಜಭಾನಸಲಗಂ ”</u>

ಗುರುವೊಂದಾದಿಯೊಳುತ್ಪಲಂ ಗುರುಮೊದಲ್ ಮೂರಾಗೆ ಶಾರ್ದೂಲಮಾ
ಗುರುನಾಲ್ಕಾಗಿರಲಂತು ಸ್ರಗ್ಧರೆ ಲಘುದ್ವಂದ್ವಂ ಗುರುದ್ವಂದ್ವಂಮಾ
ಗಿರೆ ಮತ್ತೇಭ ಲಘುದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಾ
ಹರಿಣಾಕ್ಷೀ ಲಘುನಾಲ್ಕು ಚಂಪಕಮಿವಾರುಂ ಖ್ಯಾತ ಕರ್ಣಾಟಕಂ ॥

2.1.1 ಉತ್ಪಲ ಮಾಲ ವೃತ್ತ (– U U) :–

“ ಭ,ರ,ನ,ಭ,ಭ,ರ,ಲ,ಗು ” (ಪ್ರತಿ ಸಾಲು ಸಮ)

ಸೂತ್ರ :– “ ಉತ್ಪಲಮಾಲೆಯಪ್ಪುದು ಭರಂ ನಭಭಂ ರಲಗಂ ನೆಗಳ್ದಿರಲ್ ” (20)
ಉದಾ :–

ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ
ಳ್ಗಾಗರವಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ
ನಾಗಿಯುಮೇನೊ ತೀರ್ದಪುದೆ ತೀರದೊಡಂ ಮರಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್

2.1.2 ಚಂಪಕ ಮಾಲ ವೃತ್ತ (U U U U) :–

“ ನ,ಜ,ಭ,ಜ,ಜ,ಜ,ರ ” (ಪ್ರತಿ ಸಾಲು ಸಮ)

ಸೂತ್ರ :– “ ನಜಭಜಜಂ ಜರಂ ಬಗೆಗೊಳುತ್ತಿರೆ ಚಂಪಕಮಾಲೆಯೆಂದಪರ್ ” (21)
ಉದಾ :–

ನೆನೆಯದಿರಣ್ಣ ಭಾರತದೊಳಿಂ ಪರರಾರುಮನೊಂದೆ ಚಿತ್ತದಿಂ
ನೆನೆವೊಡೆ ಕರ್ಣನಂ ನೆನೆಯ ಕರ್ಣನೊಳಾರ್ ದೊರೆ ಕರ್ಣನೇರು ಕ
ರ್ಣನ ಕಡು ನನ್ನಿ ಕರ್ಣನಳವಂಕದ ಕರ್ಣನ ಚಾಗಮೆಂದು ಕ
ರ್ಣನ ಪಡೆಮಾತಿನೊಲ್ ಪುದಿದು ಕರ್ಣರಸಾಯನಮಲ್ತೆ ಭಾರತಂ

2.1.3 ಶಾರ್ದೂಲ ವಿಕ್ರೀಡಿತ ವೃತ್ತ (– – –) :–

“ ಮ,ಸ,ಜ,ಸ,ತ,ತ,ತ,ಗು ” (ಪ್ರತಿ ಸಾಲು ಸಮ)

ಸೂತ್ರ :– “ ಕಣ್ಗೊಪ್ಪಲ್ ಮಸಜಂ ಸತತಂ ಗಮುಮಾ ಶಾರ್ದೂಲ ವಿಕ್ರೀಡಿತಂ ” (19)
ಉದಾ :–

ಮಾಯಾಕಾರ ಜಲೇಶ ಪೋಲಿಕೆಯುಮುಂಟೇಂ ನಿನ್ನ ವಿಸ್ತೀರ್ಣಕಂ
ಕಾಯ್ಯೆ ಸದ್ಗುಣವಾರ್ಧಿ ಲೋಪರಹಿತ ಪ್ರಾಪಂಚಿಕಾಂಬೋಧಿಯಂ
ಪಾಯಲ್ ದಾರಿಯ ಸೈನ್ಯವಿಷ್ಟು ಪಿಡಿಯಲ್ ನೀನಿತ್ತು ಮೇಣೆನ್ನುತುಂ
ಜಾಯಾಪ್ರಾಪ್ತಿಗೆ ಸಾರ್ದರಾಮನುಲಿದಂ ಭೂಲೋಕಮಾನ್ಯಂಗೆ ತಾಂ

2.1.4 ಮತ್ತೇಭ ವಿಕ್ರೀಡಿತ ವೃತ್ತ (U U– –) :–

" ಸ,ಭ,ರ,ನ,ಮ,ಯ,ಲ,ಗು " (ಪ್ರತಿ ಸಾಲು ಸಮ)

ಸೂತ್ರ :– " ಸಭರಂನಂ ಮಯಲಂಗಮುಂ ಬಗೆಗೊಳಲ್ ಮತ್ತೇಭ ವಿಕ್ರೀಡಿತಂ " (20)

ಉದಾ :–

ಗುರುವೊಂದಾದಿಯೊಳುತ್ಪಲಂ ಗುರುಮೊದಲ್ಮೂರಾಗೆ ಶಾರ್ದೂಲಮಾ
ಗುರುನಾಲ್ಕಾಗಿರಲಂತು ಸ್ರಗ್ಧರೆ ಲಘುದ್ವಂದ್ವಂ ಗುರುದ್ವಂದ್ವಮಾ
ಗಿರೆ ಮತ್ತೇಭ ಲಘುದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಾ
ಹರಿಣಾಕ್ಷೀ ಲಘುನಾಲ್ಕು ಚಂಪಕಮಿವಾರು ಖ್ಯಾತ ಕರ್ಣಾಟಕಂ

2.1.5 ಸ್ರಗ್ಧರಾ ವೃತ್ತ (– – – –) :–

" ಮ,ರ,ಭ,ನ,ಯ,ಯ,ಯ " (ಪ್ರತಿ ಸಾಲು ಸಮ)

ಸೂತ್ರ :– " ತೋರಲ್ಮಂ ರಂಭನಂ ಮೂಯಗಣಮುಮದೆತಾಂ ಸ್ರಗ್ಧರಾವೃತ್ತಮಕ್ಕುಂ " (21)

ಉದಾ :–

ಆ ರುದ್ರಾಕ್ಷ್ಯಗ್ನಿ ಸಂತಪ್ತನನೆನೆ ಜನರಾ ತಾಪಮಂ ಪೆರ್ಚಿಸುತ್ತುಂ
ವಾರಸ್ತ್ರೀರಕ್ತವರ್ಣಾಧರದೊಳುರೆ ನಿಲಲ್ ಜಾರುತುಂ ಪೋದನಂ ಕಾ
ಮಾರಿಪ್ರಾಸಪ್ರತೀಕ್ಷಾನಿರತನತಿಭಯಭ್ರಾಂತನಂ ಪೋಲ್ವವೋಲೇ
ಸೇರುತ್ತುಂ ನೀರನಾಗಳ್ ನಿರುಕಿಪರಿಗೆ ತಾಂ ಕಂಡನಾ ನೀರಜಾಪ್ತಂ

2.1.6 ಮಹಾ ಸ್ರಗ್ಧರಾ ವೃತ್ತ (U U– – –) :–

" ಸ,ತ,ತ,ನ,ಸ,ರ,ರ,ಗು " (ಪ್ರತಿ ಸಾಲು ಸಮ)

ಸೂತ್ರ :– " ಸತತಂನಂ ಸಂರರಂಗಂ ನೆರೆದೆಸೆಯೆ ಮಹಾಸ್ರಗ್ಧರಾವೃತ್ತಮಕ್ಕುಂ " (22)

ಉದಾ :–

ಇದು ಲಾಕ್ಷಾಗೇಹದಾಹಕ್ಕಿದಿವಿಷಾನ್ನಕ್ಕಿದಾನಾಡಜೂದಿಂ
ಗಿದು ಪಾಂಚಾಲೀ ಪ್ರಪಂಚಕ್ಕಿದು ಕೃತಕ ಸಭಾಲೋಚನಭ್ರಾಂತಿಗೆಂದೋ
ವದೆ ಪಯ್ದಂ ಕಾಲ್ಗಳಂ ತೋಳ್ಗಳನಗಲುರಮಂ ಕೆನ್ನೆಯಂ ನೆತ್ತಿಯಂ ಕೋ
ಪದಿನಯ್ದುಂ ದುರ್ನಯಕ್ಕಯ್ದೆಡೆಯನುರುಗದಾದಂಡದಿಂ ಭೀಮಸೇನಂ

SSV

3 ಅಂಶ ಗಣ

3.1 ಅಂಶ ತ್ರಿಪದಿ :–

3.1.1 ಚಿತ್ರಾ ತ್ರಿಪದಿ :–

ಉದಾ :– ಆಲಕ್ಕೆ ಹೂವಿಲ್ಲ ಸಾಲಕ್ಕೆ ಕೊನೆಯಿಲ್ಲ ವಿ,ವಿ,ವಿ,ವಿ
ಜಾಲಿಯ ಮರವು ನೆರಳಲ್ಲ ಹೆಣ್ಣಿಗೆ ವಿ,ಬ್ರ,ವಿ,ವಿ
ತಾಯಿಯ ಮನೆಯು ಸ್ಥಿರವಲ್ಲ. ವಿ,ಬ್ರ,ವಿ

3.1.2 ವಿಚಿತ್ರ ತ್ರಿಪದಿ :–

ಉದಾ :– ಹಾದೀಯಾ ಮನೆಯೋಳೇ ಪಾದದುಂ ಗುರುದೊಳೇ ವಿ,ವಿ,ವಿ,ವಿ
ಗೋಧೀಯ ಸೀರೀ ನೆರೆಯೋಳೆ ಸರಸೋತಿ ವಿ,ಬ್ರ,ವಿ,ವಿ
ಬೋದಿಸಮಯ್ಯ ಸವಿನುಡಿಯ. ವಿ,ಬ್ರ,ರು

3.2 ಅಂಶ ಚೌಪದಿ :–

ಉದಾ :–

ರತಿಹೀನಂ ಪಳವಂ ಕುಬ್ಜಂ ವಿ,ರು
ಮತಿವಂತಂ ಕೃಶನತ್ಯಂತ ವಿ,ರು
ನೃತವಾಕ್ಯಂ ಸತಿಯಂ ಕಾಯ ವಿ,ರು (ಪ್ರತಿ ಸಾಲು ಸಮ)
ಲ್ಕತಿಶಿಷ್ಟಂ ಪೆರತೇಂ ಶ್ರೇಷ್ಠಂ ವಿ,ರು

3.2.1 ಅಕ್ಕರೆಗಳು :–

3.2.1.1. ಕಿರಿಯಕ್ಕರ (3) :–

ಉದಾ :–

ನೋಡಿ ತರುಣನ ನಕ್ಕಾ ಕ್ಷಣ ವಿ,ವಿ,ರು
ಕಾಡ ಹರಟೆಯ ಹೆಂಗಸರು ವಿ,ವಿ,ರು (ಪ್ರತಿ ಸಾಲು ಸಮ)
ಕೂಡಿ ಹುಟ್ಟಿಸಿದರು ಮಗುವ ವಿ,ವಿ,ರು
ಗಾಡಿಕಾರ್ತಿಗೆ ವಾರದಲ್ಲೇ ವಿ,ವಿ,ರು

3.2.1.2. ಎಡೆಯಕ್ಕರ (4) :–

ಉದಾ :–

ಬೀದಿ ತಿರುಗದೆ ಮನಯಲ್ಲೇ ಬಿದ್ದಿದ್ದರೆ ಬ್ರ,ವಿ,ವಿ,ರು
ಕಾದಿ ಮನೆಯಾಕೆ ನಲುಗಿಸಿ ಕಾಡುವಳು ಬ್ರ,ವಿ,ವಿ,ರು
ಹಾದಿಗಿಳಿದರೆ ಪೋಲೀಸು ಹಾಕಿಯೆಲ್ಲ ಬ್ರ,ವಿ,ವಿ,ರು (ಪ್ರತಿ ಸಾಲು ಸಮ)
ಊದಿಸುವರೇನು ಮಾಡಲಿ ಒಂದೂಕಾಣೆ ಬ್ರ,ವಿ,ವಿ,ರು

3.2.1.3. ನಡುವಕ್ಕರ (5) :–

ಉದಾ :–

ಜಳಜಸಂಭವ–ಗಣಮಕ್ಕೆ ಮೊದಲೊಳೇ; ನಡುವೆ ಮೂರುಂ ಬ್ರ,ವಿ,ವಿ,ವಿ,ರು
ಜಳರುಹೋದರ–ಗಣಮಕ್ಕೆ; ಕಾಮಾಂತಕ–ಗಣಮಕ್ಕುಂ ಬ್ರ,ವಿ,ವಿ,ವಿ,ರು (ಪ್ರತಿ ಸಾಲು ಸಮ)
ತಿಳಕದಂತಿರೆ ತಲೆಯೊಳೇ ಬಂದಿಕ್ಕೆ; ಕಾಮಬಾಣಾ ಬ್ರ,ವಿ,ವಿ,ವಿ,ರು
ವಳಿಯ ಪಾಂಗೆಯ್ದೆ ಗಣಮಕ್ಕೆ ನಡುವಣಕ್ಕರಕೆ, ಸಖೀ ಬ್ರ,ವಿ,ವಿ,ವಿ,ರು

SSV

3.2.1.4. ದೊರೆಯಕ್ಕರ (6) :–

ಉದಾ :–

ನಲ್ಲೆ ನೀ ಹೀಗೇತಕಿರುವೆ?/ ನನ್ನ ಮಾತಾಡಿಸ ಬೇಡ	ವಿ,ವಿ,ಬ್ರ,ವಿ,ವಿ,ಬ್ರ	
ಸೊಲ್ಲದೇ ತಿಳಿವುದೇ ನಮಗೆ/ ಸೊಲ್ಲೇಕೋ ಒಲ್ಲನ ಜೊತೆಗೆ	ವಿ,ವಿ,ಬ್ರ,ವಿ,ವಿ,ಬ್ರ	
ಸಲ್ಲದೀ ಸೊಲ್ಲೆನ್ನ ಕಾಂತೆ/ ಸಾಕೈಯ ಒಣಮಾತಿಂದೇನು	ವಿ,ವಿ,ಬ್ರ,ವಿ,ವಿ,ಬ್ರ	(ಪ್ರತಿ ಸಾಲು ಸಮ)
ಎಲ್ಲಿ ನಾನಪಚಾರ ಗೈದೆ ಎನೆ ಕೈಕೆ ಸೆಟೆದಳು ಹೊರಳಿ	ವಿ,ವಿ,ಬ್ರ,ವಿ,ವಿ,ಬ್ರ	

3.2.1.5. ಪಿರಿಯಕ್ಕರ (7) :–

ಉದಾ :–

ಮೊದಲೊಳ ಜಗಣಂ ಕುಂದದೆ ಬರ್ಕತ್ತ ಮಯ್ದುಗಣಂಗಳೆ ವಿಷ್ಣುವಕ್ಕುಂ	ಬ್ರ,ವಿ,ವಿ,ವಿ,ವಿ,ವಿ,ರು
ತುದಿಯೋಳೇಳೆಂಬ ತಾಣದೊಳೆಲ್ಲಿಯುಂ ಕಂದರ್ಪ ರಿಪುಗಣಂ ನೆಲೆಸಿನಿಲ್ಕೆ.	ಬ್ರ,ವಿ,ವಿ,ವಿ,ವಿ,ವಿ,ರು
ಪದದೊಳೆರಡೆಂಬ ಸಂಖ್ಯೆಯೊಳಾರರೊಳಜಗಣಂ ಸಮವಾಯಮಪ್ಪೊಡಕ್ಕುಂ	ಬ್ರ,ವಿ,ವಿ,ವಿ,ವಿ,ವಿ,ರು
ಸದಮಳೇಂದು–ನಿಭಾನನೇ ಕೃರ್ತವಿನಿಪ್ಪದಿನರಿದು ಪಿರಿಯಕ್ಕರಂ	ಬ್ರ,ವಿ,ವಿ,ವಿ,ವಿ,ವಿ,ರು

3.2.1.6. ಅಕ್ಕರಿಕೆ (6) :–

" ವಿ,ಬ್ರ,ವಿ,ಬ್ರ,ವಿ,ರು " (ಪ್ರತಿ ಸಾಲು ಸಮ)

3.2.2 ಸಾಂಗತ್ಯ :–

ಉದಾ :–

ಪರಮ ಪರಂಜ್ಯೋತಿ ಕೋಟಿಚಂದ್ರಾದಿತ್ಯ	ವಿ,ವಿ,ವಿ,ವಿ
ಕಿರಣ ಸುಜ್ಞಾನ ಪ್ರಕಾಶ	ವಿ,ವಿ,ಬ್ರ
ಸುರರ ಮಕುಟಮಣಿ ರಂಜಿತ ಚರಣಾಬ್ಜ	ವಿ,ವಿ,ವಿ,ವಿ
ಶರಣಾಗು ಪ್ರಥಮ ಜಿನೇಶಾ.	ವಿ,ವಿ,ಬ್ರ

SSV

3.2.3 ಗೀತಿಕೆ :–

ಉದಾ :– 1)

ಇಂತಿರೆ ಶಬ್ದಂ ಸಂದೇಹ	ವಿ,ಬ್ರ,ವಿ
ಧ್ವಾಂತೌಘಂ ಪಿಂಗಿರೆ ಜಲಕ ನಾಗೆ ಬುಧಂ	ವಿ,ವಿ,ಬ್ರ,ವಿ
ಸಂತತಿಗ ಪ್ವಂತು ಪೇಳ್ದನಿದಂ	ವಿ,ಬ್ರ,ವಿ
ಶಾಂತಮ ನಂ ಕವಿ ತಾಗು ಣೋದಯಂ	ವಿ,ವಿ,ಬ್ರ,ವಿ

2)

ಪ್ರತಿಪದಾರ್ಥ ತತ್ತ್ವ ಭೇದದೊಳ್	ರು,ಬ್ರ,ರು
ಪ್ರತಿಷೇಧಮಂ ನೆಗಳ್ಗು ಮನಿತೆ ಮಾಳ್ಕೆಯಿಂ	ರು,ರು,ಬ್ರ,ರು
ದತಿಶಯಾ ಕ್ಷೇಪ ಗಣನಾವೃತಿ	ರು,ಬ್ರ,ರು
ಗತಿ ನೃಪ ತುಂಗ ದೇವ ಮಾರ್ಗದೊಳ್	ರು,ರು,ಬ್ರ,ರು

3.2.4 ಏಳೆ :–

ಉದಾ :–

ಗಡ್ಡವುಳ್ಳವರೆಲ್ಲ ದೊಡ್ಡವರೆನಬೇಡ	ವಿ,ವಿ,ವಿ,ವಿ
ಗಡ್ಡುಳ್ಳ ಹೋತ ದೊಡ್ಡದೆ.	ವಿ,ಬ್ರ,ವಿ

3.2.5 ಛಂದೋ ವಸಂತ :–

ಉದಾ :– 1) ಮಂದರ ಧರಗಣ ಮೆಸೆದಿರೆ ಮೊದಲೊಳ್ " ವಿ,ಬ್ರ,ಬ್ರ,ಬ್ರ,ಬ್ರ " (ಪ್ರತಿ ಸಾಲು ಸಮ)

2) " ವಿ,ವಿ,ವಿ,ಬ್ರ "

3.2.6 ಉತ್ಸಹ :-

ಊರ ಕಡೆಯ " ಬ್ರ,ಬ್ರ,ಬ್ರ,ಬ್ರ,ಬ್ರ,ಬ್ರ,ಬ್ರ,+ಗು " (ಪ್ರತಿ ಸಾಲು ಸಮ)

3.3 ಅಂಶ ಷಟ್ಪದಿ :-

ಉದಾ :- **ಮಂದರ ಧರಗಣಂ**	ವಿ,ವಿ
ಬಂದಿರ್ಕಾರಂತ್ಯದೊಳ್	ವಿ,ವಿ
ಕುಂದದೆ ನೆಲೆಸುಗೆ ಮದನಹರಂ	ವಿ,ವಿ,ರು
ಇಂದುನಿ ಭಾವನೆ	ವಿ,ವಿ
ಮುಂದಣ ತೆರನುಮೀ	ವಿ,ವಿ
ಯಂದಮಾದಂದು ಷಟ್ಪದ ಲಕ್ಷಣಂ	ವಿ,ವಿ,ರು

SSV